FIRST SIGHTING IN V'NAGARA

Rare Indian scops owl spotted near Daroji sanctuary

KIRAN BALANNANAVAR
@ Hosapete

IN a rare and remarkable discovery, birdwatchers have recorded the first-ever sighting of the Indian scops owl near the Daroji Sloth Bear Sanctuary in Vijayanagara. The nocturnal bird, known for its distinct ear-like tufts and exceptional camouflage, was identified earlier this week by birdwatchers Sabyasachi Roy, Sridhar Perumal, and Pompayya Malemath, who confirmed the species after close visual and auditory inspection.

Roy said that bird measuring approximately 20 to 25 cm in length. The bird is a small-sized owl species that blends effortlessly into its surroundings. With a greyish body and dark eyes, its cryptic appearance makes it notoriously difficult to spot during daylight. The bird was detected by its distinctive call a giveaway to its otherwise hidden presence.

Malemath, from Hampi, said this is the first recorded sighting of the indian scops owl in this region, and it opens up new avenues for ornithological study in and around the sanctuary. Experts believe the presence of the owl in this habitat which primarily supports sloth bears and other endemic wildlife could indicate a wider ecological range than previously assumed. Further studies are expected to assess whether the Indian scops owl has established a breeding population in the area or if this sighting was a rare migratory occurrence.

The Daroji Sloth Bear Sanctuary, already noted for its biodiversity, is now drawing attention from avian researchers and wildlife enthusiasts eager to learn more about this new addition to the region's fauna. Wildlife authorities and conservationists have welcomed the discovery, noting that such sightings underscore the importance of continued conservation efforts and habitat protection in lesser explored regions of Karnataka.



Scops owl | EXPRESS

21-10-2025
Indian Exp. Pg.07

ಶ್ರೇಷ್ಠ ತೋಟಗಾರಿಕಾ ರೈತ-ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ ಆಹ್ವಾನ

• **ಬೆಂಗಳೂರು:** ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾನಿಲಯದಿಂದ ಶ್ರೇಷ್ಠ ತೋಟಗಾರಿಕಾ ರೈತ/ ರೈತ ಮಹಿಳೆ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಾಗಲಕೋಟ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು 2025-26ರ ಸಾಲಿನಲ್ಲಿ ಡಿ.21 ರಿಂದ 23ರ ವರೆಗೆ ಬಾಗಲಕೋಟೆಯ ಉದ್ಯಾನಗಿರಿ ಆವರಣದಲ್ಲಿ ತೋಟಗಾರಿಕೆ ಮೇಳವನ್ನು ಹಮ್ಮಿಕೊಂಡಿದ್ದು, ವಿವಿ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಪ್ರತಿಯೊಂದು ಜಿಲ್ಲೆಗೆ ಒಬ್ಬರಂತೆ ಶ್ರೇಷ್ಠ ತೋಟಗಾರಿಕಾ ರೈತ ಅಥವಾ ರೈತ ಮಹಿಳೆ ಆಯ್ಕೆ ಮಾಡಿ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಗಲಿದೆ. ಬಾಗಲಕೋಟೆ ಜಿಲ್ಲೆಯ ತೋಟಗಾರಿಕೆ ಸಾಧಕ ರೈತ ಅಥವಾ ರೈತ ಮಹಿಳೆ ನಿಗದಿತ ಅರ್ಜಿ ನಮೂನೆಯಲ್ಲಿ ಸಂಪೂರ್ಣ ಮಾಹಿತಿಯನ್ನು ಛಾಯಾ ಚಿತ್ರಗಳ ಮೂಲಕ ದೃಢೀಕರಿಸಿ ಸಲ್ಲಿಸಬೇಕು. ಬಾಗಲಕೋಟೆ ಜಿಲ್ಲೆಯ ರೈತ ಅಥವಾ ರೈತ ಮಹಿಳೆ ಅರ್ಜಿ ನಮೂನೆಯನ್ನು ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆ ಕಚೇರಿಯಿಂದ ಅಥವಾ ವಿಸ್ತರಣಾ ಮುಂದಾಳು, ವಿಸ್ತರಣಾ ನಿರ್ದೇಶನಾಲಯದಿಂದ ಅಥವಾ ತೋಟಗಾರಿಕೆ ವಿಜ್ಞಾನಗಳ ವಿವಿಯ ಅಂತರ್ಜಾಲದ ಮೂಲಕವು ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ನ.5 ರೊಳಗಾಗಿ ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9845655856, 9538243305 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

Hosa Digantha Pg.04

FARMERS STUCK

Kuruvai Paddy Piles Up as Procurement Slows

Poor transportation, gunny bag shortage, and lack of consultation hit farmers hard

IANS

Chennai: With the Kuruvai harvest almost complete, farmers across the Cauvery Delta are struggling to get their paddy procured as the Tamil Nadu Civil Supplies Corporation (TNCSC) has failed to ensure proper planning and coordination.

Poor transportation, shortage of gunny bags, and the absence of pre-season consultations with farmers have left thousands of tonnes of paddy heaped outside Direct Procurement Centres (DPCs), exposed to the monsoon rains.

This year's Kuruvai cultivation has been one of the most extensive in recent times, with 6.31 lakh acres under cultivation—a sharp rise from the normal 3.87 lakh acres.

While only 30% of the crop remains to be harvested, procurement lagged far behind expectations. Of the 70% already harvested, just 40% has been lifted by the TNCSC, leaving massive stockpiles at various centres.

Each DPC is estimated to be holding between 10,000 and 20,000 chippoms (40-kg bags) of paddy, leading to congestion and logistical challenges. The delays were attributed to administrative instability in TNCSC, which saw the transfer of five managing directors between January and October this year. The leadership vacuum affected crucial decision-making during the peak procurement phase, especially in Thanjavur, Tiruvarur, Mayiladuthurai, and Nagapattinam—the heart of Delta region.



MASSIVE STOCKPILES

Of the 70% paddy harvested, just 40% was lifted by TNCSC, leaving massive stockpiles at many centres

The gunny bag shortage has added to farmers' distress. Despite official claims that stocks were being replenished through fresh procurement from West Bengal, the situation on the ground remains grim, with most DPCs reporting inadequate supply.

The shortage has slowed down packing and dispatch operations, further delaying transportation to warehouses. In several areas, paddy is being stored in open spaces as temporary DPCs have not been fully activated. With limited lorries available for movement from DPCs to godowns, procurement staff have managed to lift only between 500 and 600 bags a day per centre, against the target of 1,000 bags.

Economic Times. Pg.04

Spent ₹66k, Pune farmer gets mere ₹664 for 7.5 quintals of rain-hit onions

Ardhra.Nair@timesofindia.com

Pune: Sudam Ingle, a farmer from Purandar, spent around Rs 66,000 on his onion crop this season but the incessant rain damaged most of his yield. He managed to salvage a portion and spent another Rs 1,500 to pack and transport it to Pune market yard for sale on Friday. However, to his shock, Ingle received just Rs 664 for 7.5 quintals of onions.

"This was from one acre. I still have onions from another 1.5 acres, but I won't sell them; I will run a rotor and turn them into fertiliser for next year. That is more profitable than selling the crop," he said. "I am still a relatively big farmer. I don't know how smaller farmers with just one or two acres, many of whom have taken loans, will survive. If govt doesn't step in, suicides will increase."

Ingle's story is echoed across Maharashtra's farmlands, where relentless rain and collapsing prices have left farmers struggling for survival. From onions, tomatoes, potatoes to pomegranates, custard apples and soyabean, almost every crop has taken a hit this season.

With no money in hand, farmers have no purchasing power, directly affecting rural markets that flourish during Diwali. "This year, Diwali is being celebrated only in cities. In villages, there's no money to buy even a diya," said an APMC (Agricultural Produce Market Committee) member from Nashik.

At the Lasalgaon APMC, Asia's largest onion market, prices range from Rs 500 to Rs 1,400 per quintal, with the average stable at Rs 1,050 (Rs 10.50/kg) for the past week before it closed for Diwali.



PEELING AWAY HOPE: An APMC member said Diwali is being celebrated only in cities; in villages, there's no money to buy even a diya

An APMC member said, "This summer (March-April), we saw a bumper onion crop. The shelf life is around seven months, so many farmers who didn't sell then, hoping for higher prices, stored it and are selling now. The new crop faced the wrath of rain as 80% of the onions in Nashik region is damaged. Even the salvaged stock is of poor quality and selling for very low prices."

Ingle said farmers spend heavily right from preparing fields, buying saplings, sowing, spraying pesticides, watering, weeding, harvesting, packing and transporting the crop to market. "The net amount I got for 7.5 quintal— sold at different rates depending on level of damage, and deducting cost of trasport and packaging— was Rs 664," Ingle said, adding, "Being a farmer means a life of struggles."

Manikrao Zende, who farms custard apple, pomegranate and onions in Purandar, incurred significant losses this year.

"Looking at the market rate, I ran a rotor through my onion crop which will at least help fertilise the field because selling it would increase my losses. I invested Rs 1.5 lakh in the pomegranate farm this year, but due to rain, the plants turned black, forcing me to discard them. The same happened with 500 custard apple saplings I had planted. It cost me around Rs 1 lakh, but rain ruined them, and I had to sell them for Rs 50,000," Zende said.

Zende blamed the govt for ignoring the plight of farmers, alleging that the administration is yet to conduct a panchnama of his fields to assess rain damage. He also linked the rise in crimes across the state to the growing distress in farming. "Youths have no money, no job, and criminal elements easily attract this crowd. The day farmers get work and fair prices, crimes will come down," he said.

Manik Gore, a commissioning agent at the Chakan APMC and a farmer himself, said he sowed soyabean on one acre his year but nothing survived the rain. "Onions and potatoes from other states like UP and Gujarat are flooding markets. Farmers around Pune are still better off, but 80-100 km away, the situation is heartbreaking," Gore said. He blamed poor govt policies for the onion crisis. "When India banned exports in 2023, other countries swooped in on our market share. When ban was finally lifted, we had lost our clients in the international market. If the govt can ban exports when prices rise, should it not buy onions at a good price when the market crashes? That never happens. Farming means a life of suffering," he said.

According to Ramesh Suryavanshi, a soyabean trader at Latur APMC, one of the biggest in India, 50% of the crop in the region was damaged in rain.

"The average price of good soyabean (12-2-2 which means maximum 12% moisture, 2% impurities (foreign matter) and 2% damaged kernels) is between Rs 4,100 and Rs 4,250. But the ones destroyed by moisture are selling for as low as Rs 2,000-Rs 3,000 per quintal, which doesn't even cover half of the input cost," Suryavanshi said. Even the farmers and traders who kept old stock in hopes to sell it when the markets improve are forced to sell at low prices. "The rates of soyabean have not improved for two years now and even the prices of chana and toor dal are poor. Good quality chana is being sold at Rs 5,400-Rs 5,500 but damaged ones are selling at Rs 3,000.

Times of Ind. Pg.06

ಬೆಳೆ ನಷ್ಟ | ಆರ್ಥಿಕ ಸಂಕಷ್ಟದಲ್ಲಿ ವೆಂಕಟರಾಜುನಹಳ್ಳಿ ಸತೀಶ್
ಕಳಪೆ ಬೀಜದಿಂದ ನಲುಗಿದ ಬೆಳೆಗಾರ





•ಟೀಕಲ್: ಕಳಪೆ ಗುಣಮಟ್ಟದ ಬಿತ್ತನೆ ಬೀಜ ನೀಡಿ ರೈತರಿಗೆ ವಂಚನೆ ಮಾಡಿರುವ ಪ್ರಕರಣ ಟೀಕಲ್‌ನ ಹುಳದೇನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ವೆಂಕಟ ರಾಜನಹಳ್ಳಿ ಗ್ರಾಮದ ರೈತ ಸತೀಶ್ ತಮ್ಮ ತೋಟದಲ್ಲಿ ಟೊಮೆಟೊ, ಕಳಪೆ ಬೀಜ ವಿತರಣೆ ಮಾಡಿ ವಂಚನೆ ಮಾಡಲಾಗಿದೆ.

ಈ ರೀತಿಯಾಗಿ ಗ್ರಾಮದ ರೈತ ಸತೀಶ್ ಸೇರಿದಂತೆ ಗ್ರಾಮದಲ್ಲಿ ಇನ್ನೂ ಹಲವಾರು ರೈತರಿಗೆ ಇದೇ ರೀತಿ ನಡೆದಿದೆ. ಎಲ್ಲ ರೈತರು ಕಂಗಲಾಗಿದ್ದಾರೆ. ಸುಮಾರು ಒಂದು ಸಾವಿರಕ್ಕೂ ಹೆಚ್ಚು ಟೊಮೆಟೊ ಬೆಳೆದ ಬಾಕ್ಸ್‌ಗಳು ಹಬ್ಬದ ದಿನದಂದು ಸೋಮವಾರ ಮಂಡಿಗೆ ಹಾಕಲು ಫೋನ್ ಮಾಡಿದಾಗ ಸತೀಶ್‌ಗೆ ಆತಂಕ ಉಂಟಾಯಿತು.

ಏಕೆಂದರೆ, ಆ ಕಡೆಯಿಂದ ರೈತನಿಗೆ ಈ ಟೊಮೆಟೊ ತಳ ಸರಿಯಿಲ್ಲವೆಂದು ಇದನ್ನು ಯಾರು ಖರೀದಿಸುವವರು ಇಲ್ಲವೆಂದು ಹೇಳಿಬಿಟ್ಟರು. ಈ ಹಿಂದೆಯೂ ರೈತ ಸತೀಶ್ ಕೆಲವು ಸ್ಯಾಂಪಲ್ ಬಾಕ್ಸ್ ತೆಗೆದುಕೊಂಡು ಹೋದಾಗ ಇದೇ ಅನುಭವವಾಗಿತ್ತು ಎಂದು ತಿಳಿದು ಬಂದಿದೆ.

ಕೊಡಲು ಸುಂದರ ಟೊಮೆಟೊ: ಟೊಮೆಟೊ ನೋಡಲು ಸುಂದರವಾಗಿ ಕಾಣಿಸುವುದು. ಆದರ ಗುಣಮಟ್ಟ ಆಕಾರ ಸರಿ ಇಲ್ಲವಾಗಿದೆ. ರೈತ ಹೇಳುವಂತೆ ಮೂರು ತಿಂಗಳ ಹಿಂದೆ ಆದಿರಾಜ್ ಕಂಪನಿಯಿಂದ ಬೀಜ ನೀಡಿ ಅದು ಉತ್ತಮ ಇಳುವರಿ ಕೊಡುತ್ತದೆ ಎಂದು ಕಂಪನಿ ಸೂಪರ್‌ವೈಸರ್ ಹೇಳಿದ್ದರು. ಆದರೆ, ಇಂದು ಒಂದು ಸಾವಿರ ಬಾಕ್ಸ್ ದಾಸ್ತಾನು ಮಾಡದೆ ಹಾಗೆ ಉಳಿದಿದೆ. ಈ ಬಗ್ಗೆ ಕಂಪನಿಯವರಿಗೆ ಫೋನ್ ಮಾಡಿದರೆ ಅವರು ಫೋನ್ ತೆಗೆಯುತ್ತಿಲ್ಲ ಎಂದು ಏನು ಮಾಡಬೇಕೆಂದು ದಿಕ್ಕು ತೋಚದಂತೆ ಆಗಿದೆ ಎಂದು ರೈತ ಸತೀಶ್ ಹೇಳುವರು.

ಈ ಬಗ್ಗೆ ತಾಲೂಕು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ನ್ಯಾಯ ಒದಗಿಸುವಂತೆ ಕೋರಿದ್ದೇನೆ. ನನ್ನ ಮೂರು ತಿಂಗಳ ಪಸಲು ನಷ್ಟ ಉಂಟಾಗಿದೆ. ಹಬ್ಬದ ದಿನದಂದು ಬೆಳೆಯು ಕೈಗೆ ಬಾರದಂತಾಗಿದೆ.

ನ್ಯಾಯ ಒದಗಿಸಲು ಕ್ರಮ

ಟೊಮೊಟೊ ಬೆಳೆ ನೋಡಲು ಚೆನ್ನಾಗಿದ್ದರೂ ಆದರ ಆಕಾರ, ಗುಣಮಟ್ಟಕ್ಕೆ ಮಾರುಕಟ್ಟೆಯಲ್ಲಿ ಸರಿಯಾದ ಗ್ರೇಡ್ ಸಿಕ್ಕಿಲ್ಲವಾಗಿದೆ. ಇದರಿಂದ ರೈತನಿಗೆ ನಷ್ಟವಾಗಿದೆ. ರೈತ ಸತೀಶ್‌ಗೆ ಲಿಖಿತ ಮುಖೇ ದೂರು ನೀಡುವಂತೆ ತಿಳಿಸಲಾಗಿದೆ. ದೂರು ಬಂದ ತಕ್ಷಣವೇ ಕಂಪನಿಯವರನ್ನು ಕರೆಸಿ, ಚರ್ಚಿಸಿ ರೈತನಿಗೆ ನ್ಯಾಯ ಒದಗಿಸುವುದಾಗಿ ಸಹಾಯಕ ಹಿರಿಯ ತೋಟಗಾರಿಕೆ ನಿರ್ದೇಶಕರಾದ ಎ.ಆರ್ . ದಿವ್ಯಾ ಪ್ರತಿಕ್ರಿಯಿಸಿ ತಿಳಿಸಿದ್ದಾರೆ.

Hosa Digantha Pg.07

ಮಿಂಚುಹುಳುವಿದ್ದರೆ ನಿತ್ಯ ದೀಪೋತ್ಸವ

ಬೆಳಕಿನ ಹಬ್ಬ ದೀಪಾವಳಿ ಬಂದಿದೆ. ನಾನಾ ಆಚರಣೆಗಳೊಂದಿಗೆ ಸಂಭ್ರಮಿಸುವ ಈ ಹಬ್ಬದಲ್ಲಿ ಬೆಳಗುವ ದೀಪಗಳು ಕಥಾನಾಯಕನಂತೆ. ಇಡೀ ಹಬ್ಬದ ಸಂಭ್ರಮ ಅಡಗಿರುವುದು ಉರಿಯುವ ಹಣತೆಗಳಲ್ಲಿ.

ದೀಪೋತ್ಸವ ಎಂಬುದು ಕೇವಲ ಸಂಭ್ರಮವಲ್ಲ, ಹೊಸತೊಂದು ಆನಂದದ ಲೋಕದ ಸೃಷ್ಟಿ. ಗುಂಪು ಗುಂಪಾಗಿ, ಸಾಲು ಸಾಲಾಗಿ ಹತ್ತು, ನೂರು, ಸಾವಿರ, ಲಕ್ಷದ ಲೆಕ್ಕದಲ್ಲಿ ಹಣತೆ ದೀಪಗಳು ಏಕಕಾಲಕ್ಕೆ ಬೆಳಗುವಾಗಿನ ಸಂತೋಷಕ್ಕೆ ಸಾಟಿಯಿಲ್ಲ.



ಆದರೆ, ಹಬ್ಬ, ಹರಿದಿನದ ಪರಿವೆಯಿಲ್ಲದೆ ಊರು, ಕಾಡುಮೇಡಿನ್ನದೆ ಕತ್ತಲ ಮದ್ಯೆ ಭೂಮಿಯಲ್ಲಿ ನಕ್ಷತ್ರ ಲೋಕ ಸೃಷ್ಟಿಸುವ ಮಿಂಚುಹುಳುಗಳು ಜೀವಂತ ದೀಪಗಳು. ಅವು 'ಸ್ವಯಂಪ್ರಕಾಶ'ವೆಂಬ ಶಬ್ದದ ಸಾಕಾರ ರೂಪಗಳು. ಅವುಗಳಿಗೆ ಋತು, ಮಾಸಗಳ ಮಿತಿಯಿಲ್ಲ, ಎಣ್ಣೆ, ಬತ್ತಿ, ವಿದ್ಯುತ್ ಯಾವುದರ ಹಂಗೂ ಇಲ್ಲ. ಸೃಷ್ಟಿಯ ವಿಸ್ಮಯವೆನಿಸಿದ ಈ ಕೀಟಗಳು ಕತ್ತಲಲ್ಲಿ ಹಳದಿ, ಹಸಿರು ಬಣ್ಣದ ಬೆಳಕು ಸೂಸುತ್ತ ಹಾರಾಡುತ್ತಿದ್ದರೆ ಆ ಘಳಿಗೆ ದೀಪೋತ್ಸವದ ಸಡಗರಕ್ಕಿಂತ ಕಮ್ಮಿಯೇನಲ್ಲ.

'ಲ್ಯಾಂಪ್ಶೆರಡೇ' ಎಂಬ ಜಾತಿಗೆ ಸೇರಿದ ಜೀರುಂಡೆ ಮಾದರಿಯ ಮಿಂಚು ಹುಳುಗಳು ವಾಸ್ತವದಲ್ಲಿ ಬೆಳಕು ಚೆಲ್ಲುವುದು ಶತ್ರುಗಳನ್ನು ಓಡಿಸಲು ಹಾಗೂ ಸಂಗಾತಿಗಳನ್ನು ಸೆಳೆಯಲು. ಹೂಗಳ ಮಕರಂದ ಹೀರಿ ಬದುಕುವ ಇವುಗಳ ಹೊಟ್ಟೆ ಕೆಳ ಭಾಗದ ನಳಿಕೆಯಲ್ಲಿರುವ ಜೀವಕೋಶಗಳಲ್ಲಿ 'ಲ್ಯೂಸಿಪೆರಿನ್' ಎಂಬ ರಾಸಾಯನಿಕ ಬಿಡುಗಡೆಯಾಗುತ್ತದೆ. ಅದರೊಂದಿಗೆ 'ಲ್ಯೂಸಿಪೆರಾಸ್' ಎಂಬ ಕಿಣ್ವಗಳು ಸೇರಿಕೊಂಡು ಉತ್ಕರ್ಷಣ, ಅಪಕರ್ಷಣ ಕ್ರಿಯೆಗಳು ನಡೆದಾಗ ಮಿಂಚುವಿಕೆ ಉಂಟಾಗುತ್ತದೆ.

ಮಿಂಚುಹುಳುಗಳ ಬೆಳಕಿನ ಸಮೂಹ ಸಂಭ್ರಮ ನೋಡಿದವರು ಅದನ್ನೆಂದೂ ಮರೆಯಲಾರರು. ಹಿಂದೆಲ್ಲ ಸೂರ್ಯ ಜಾರುತ್ತಲೇ ಹಳ್ಳಿಗಾಡುಗಳ ಹಾದಿಯಲ್ಲಿ ನಕ್ಷತ್ರಗಳಂತೆ ಮಿನುಗುತ್ತಿದ್ದ ಈ ಹುಳುಗಳ ಗುಂಪು ನೀಡುತ್ತಿದ್ದ ಆನಂದ ಅನುಭವಿಸಿದವರಿಗೇ ಗೊತ್ತು. ಅದೆಲ್ಲೋ ತಪ್ಪಿ ಬಂದು ಸಿಕ್ಕಿಹಾಕಿಕೊಂಡ ಮಿಂಚುಹುಳುವನ್ನು ಬೆಂಕಿ ಪೊಟ್ಟಣದಲ್ಲಿಟ್ಟು, ಬೆಳಕು ನೋಡಿ ಬಾಲ್ಯದಲ್ಲಿ ನಲಿದವರ ಸ್ಮೃತಿಪಟಲದಲ್ಲಿ ಆ ಬೆಳಕು ಇಂದಿಗೂ ಮಾಸಿದಂತಿಲ್ಲ.

ಜಗತ್ತಿನ ಅದೆಷ್ಟೋ ಸಾಹಿತ್ಯ ಕೃತಿಗಳಿಗೆ ಪ್ರೇರಣೆಯಾಗಿರುವ ಮಿಂಚುಹುಳುಗಳು ನಮಗೆ ಬದುಕಿನ ಪಾಠವಿದ್ದಂತೆ. ''ನಾನು ತುಂಬ ಚಿಕ್ಕವನಿರಬಹುದು, ಆದರೆ ಮಿಂಚುಹುಳದಂತೆ ಬದುಕುತ್ತೇನೆ. ಕತ್ತಲೆ ನನ್ನನ್ನು ನೋಡಿ ನಾಚಿಕೆಪಡುತ್ತದೆ,'' ಎಂದು ಕವಿ ಇಶಾನ್ ಸೆಹಗಲ್ ಹೇಳಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಅರಣ್ಯ ನಾಶ, ನಗರೀಕರಣ, ಪರಿಸರ ಮಾಲಿನ್ಯದ ಮದ್ಯೆ ಮಿಂಚುಹುಳುಗಳ ಸಂತತಿ ಕಗ್ಗತ್ತಲೆಯತ್ತ ಮುಖ ಮಾಡಿರುವುದು ಖೇದಕರ. ಈ ಸಣ್ಣ ಜೀವಿಗಳ ಉಳಿವಿಗಾಗಿ ದೊಡ್ಡ ಪ್ರಯತ್ನ ಬೆಳಕು ನಮ್ಮೊಳಗೆ ಬೆಳಗಬೇಕಿದೆ. ಮಿಂಚುಹುಳುಗಳ ಉಳಿವಿದ್ದರೆ ನಿತ್ಯವೂ ದೀಪೋತ್ಸವ.

Vijaya Kar. Pg.04

ಬದನೆಕಾಯಿ ಕೆ.ಜಿಗೆ 240 ರೂ.!

ಮುಂಡಗೋಡ (ಉತ್ತರ ಕನ್ನಡ): ದೀಪಾವಳಿ ಹಬ್ಬದ ಪ್ರಯುಕ್ತ ಪಟ್ಟಣದಲ್ಲಿ ಸೋಮವಾರ ಸಂತೆಯಲ್ಲಿ ಬದನೆಕಾಯಿ ಬೆಲೆ ಗಗನಕ್ಕೆ ಏರಿದೆ. ಬೆಳಗ್ಗೆ ಕೆ.ಜಿಗೆ 60-80 ರೂ. ಇದ್ದದರ, ಸಂಜೆಯೊಳಗೆ 240 ರೂ.ಗೆ ಮುಟ್ಟಿತು. ಆದರೂ ಗ್ರಾಹಕರು ಬೆಲೆ ಲೆಕ್ಕಿಸದೆ ಖರೀದಿಗೆ ಮುಗಿ ಬಿದ್ದಿದ್ದರು.



Vijaya Kar. Pg.05

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಸೋಮವಾರ 20 ಅಕ್ಟೋಬರ್ 2025
20 OCTOBER 2025
11 C
ಸಮಸ್ತ ಕರ್ನಾಟಕ

ವಿ ರೈತ ಮಿತ್ರ



■ಸೇವಂತಿಗೆ ಎಲೆಗಳ ಮೇಲೆ/ತಳಭಾಗದಲ್ಲಿ ತಿಳಿಬಿಳಿ ಬಣ್ಣದ ಚುಕ್ಕೆಗಳು ಕಾಣುತ್ತಿದ್ದು, ಇದಕ್ಕೆ ಪರಿಹಾರ ತಿಳಿಸಿ.

| ಈಶ ಚಿಕ್ಕಬಳ್ಳಾಪುರ

ಸೇವಂತಿಗೆಯು ಮಾನವ ಕೃಷಿ ಮಾಡಿದ ಮೊದಲ ಹೂ ಎಂದೇ ಖ್ಯಾತಿ ಪಡೆದ ಪ್ರಮುಖ ವಾಣಿಜ್ಯ ಬೆಳೆ. ಸೇವಂತಿಗೆಯು ಬಿಳಿ ತುಕ್ಕು ರೋಗಕ್ಕೆ ಆಗಾಗ ತುತ್ತಾಗುತ್ತಿದ್ದು, ಮೊದಲಿಗೆ ಎಲೆಯ ಮೇಲ್ಭಾಗದಲ್ಲಿ ಕಲೆ/ಚುಕ್ಕೆಗಳು ಕಂಡುಬಂದು ಅದರ ಅನುಕ್ರಮ ಕೆಳಭಾಗದಲ್ಲಿ ತಿಳಿಬಿಳಿ/ತಿಳಿಬೂದು ಬಣ್ಣದ ಕಲೆಗಳು ಕಾಣಿಸಿಕೊಳ್ಳುತ್ತವೆ. ಈ ರೀತಿಯ ಕಲೆ/ಚುಕ್ಕೆಗಳು ಕಾಂಡ ಮತ್ತು ಹೂವಿನ ಕೆಳಭಾಗದಲ್ಲೂ ಕಾಣಬಹುದು. ರೋಗದ ತೀವ್ರತೆ ಹೆಚ್ಚಾದಲ್ಲಿ ಎಲೆಗಳು ಉದುರುತ್ತವೆ. ಇದರ ಪರಿಣಾಮ ಇಳುವರಿ ಕುಂಠಿತಗೊಳ್ಳುತ್ತದೆ.

ನಿರ್ವಹಣೆ: ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶಪಡಿಸುವುದು. ಅವಶ್ಯವಿದ್ದಲ್ಲಿ ಪ್ರತಿ ಲೀಟರ್ ನೀರಿಗೆ ಥಯೋಫಿನೇಟ್ ಮಿಥೈಲ್ 75 ಡಬ್ಲ್ಯು.ಪಿ 1.0 ಗ್ರಾಂ ಅಥವಾ ಪ್ರೋಪಿಕೋನೋಜೋಲ್ 25 ಇ.ಸಿ 1.0 ಮಿ.ಲೀ. ನಂತೆ ಬೆರೆಸಿ ಸಿಂಪಡಿಸುವುದು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

HDK urges farmers to grow more pulses to reduce dependence on imports

EXPRESS NEWS SERVICE
@Bengaluru

UNION Minister for Steel and Heavy Industries HD Kumaraswamy urged farmers to cultivate pulses alongside paddy to reduce India's dependence on imports.

Inaugurating the 3rd Agricultural Insect Biocontrol Expo and the 33rd Foundation Day of Indian Council of Agricultural Research - National Bureau of Agricultural Insect Resources (ICAR-NBAIR) here on Sunday, he said the Centre has launched several welfare schemes and remains committed to farmers' upliftment.

Bengaluru Rural MP, Dr CN Manjunath, said, "India loses nearly 15 to 35% of crops every year to pest-related diseases, resulting in farmer losses estimated at Rs 90,000 crore" and stressed that human health depends on the quality of crops and the fertility of the soil. "We need to use biological methods more often. Many diseases can be prevented by adopting organic methods. It is necessary to reduce the use of pesticides and chemical fertilisers", he said.

He said, "The environment does not need humans — humans need the environment. If we destroy the soil, air, and water, we destroy ourselves. Our future depends on adopting sustainable and biological farming methods. Healthy soil, healthy crops, and healthy people, that must be our new agricultural mantra."

Union Minister of State for Micro, Small and Medium Enterprises and Ministry of Labour and Employment, Shobha Karandlaje, said the previous generations of our farmers had more knowledge about farmer-friendly insects. Work is being done to disseminate this knowledge to today's farmers as well. Farmers, researchers, and scientists are being sensitised about organic farming.

During the event, farmers who achieved excellence in agriculture and scientists from ICAR - NBAIR were felicitated. SN Sushil, Director of the institute, and others were present on the occasion.



Union Minister for Heavy Industries HD Kumaraswamy with Union Minister of State for Labour Shobha Karandlaje and BJP MP Dr CN Manjunath in Bengaluru on Sunday

We need to use biological methods. Many diseases can be prevented by adopting organic methods. It is necessary to reduce the use of pesticides and chemical fertilisers

CN Manjunath, Bengaluru Rural MP

20.10.2025
Indian Exp. Pg.05

60 ಕೆ.ಜಿ. ದರ 2000 ರು.ಗೆ ಏರಿಕೆ | ಉತ್ತರ ಭಾರತ ಮಾರುಕಟ್ಟೆಯಲ್ಲಿ ಬೇಡಿಕೆ | ನವೆಂಬರ್ ಚಳಿಗೆ ಮತ್ತಷ್ಟು ಬೆಲೆ ಏರಿಕೆ ಸಾಧ್ಯತೆ

ಶುಂಠಿ ದರ ಏರಿಕೆ: ರೈತರ ಮುಖದಲ್ಲಿ ಮಂದಹಾಸ

ಕೂವಪ್ಪ ಐ.ಕೆಟ್ ಬೆಂಗಳೂರು

ಈ ಹಿಂದೆ ಶುಂಠಿ ಬೆಲೆ ಕುಸಿತದಿಂದಾಗಿ ಕಂಗಲಾಗಿದ್ದ ರೈತನ ಮುಖ, ಪ್ರಸ್ತುತ ಶುಂಠಿ ಬೆಲೆ ಏರಿಕೆಯಿಂದ ಹಿರಿ ಹಿರಿ ಹಿಗ್ಗುವಂತಾಗಿದೆ. ಆದರೆ ಈಗಾಗಲೇ ಕಡಿಮೆ ದರಕ್ಕೆ ಶುಂಠಿ ಮಾರಾಟ ಮಾಡಿದವರು ಕೈ ಕೈ ಹಿಚುಕಿಕೊಳ್ಳುತ್ತಿದ್ದಾರೆ.

ಉತ್ತರ ಭಾರತ ರಾಜ್ಯಗಳಾದ ದೆಹಲಿ, ಮಧ್ಯಪ್ರದೇಶ ಮತ್ತು ಮುಂಬೈ ಮಾರುಕಟ್ಟೆಗಳಲ್ಲಿ ಬೇಡಿಕೆ ಹೆಚ್ಚಿದ ಕಾರಣಕ್ಕಾಗಿ, ನಮ್ಮ ರಾಜ್ಯದಲ್ಲಿ ಶುಂಠಿ ಬೆಲೆ ಏರಿಕೆಯಾಗಿದೆ. ಮಲೆನಾಡು, ಅರೆ ಮಲೆನಾಡು ವ್ಯಾಪ್ತಿಯ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಹಾವೇರಿ, ದಾವಣಗೆರೆ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಶುಂಠಿ ಬೆಳೆಯಲಾಗುತ್ತದೆ. ದೇಶದಲ್ಲಿ ಕರ್ನಾಟಕ, ಕೇರಳ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರದ ಕೆಲ ಪ್ರದೇಶಗಳಲ್ಲಿಯೂ ಶುಂಠಿ ಕೃಷಿ ವ್ಯಾಪಕವಾಗಿದೆ. ಇಡೀ ದೇಶದ ತರಕಾರಿ ಮಾರುಕಟ್ಟೆಯ ಬೇಡಿಕೆಯ ಕಡೆ ಗಮನ ಹರಿಸಿದರೆ, ಒಂದು ದಿನಕ್ಕೆ ಸರಾಸರಿ 10 ಸಾವಿರ ಕ್ವಿಂಟಾಲ್ ಹಸಿಶುಂಠಿಯ ಅಗತ್ಯವಿದೆ, ಅಂದರೆ ಒಂದು ತಿಂಗಳಿಗೆ ಸರಾಸರಿ 3 ಲಕ್ಷ ಕ್ವಿಂಟಾಲ್ ಹಸಿ ಶುಂಠಿ ಮಾರಾಟವಾಗುತ್ತಿದೆ.

ಎಪಿಎಂಸಿಯಲ್ಲೂ ದರ ಏರಿಕೆ: ಜನವರಿ-ಫೆಬ್ರವರಿ ತಿಂಗಳನಲ್ಲಿ ಹಸಿಶುಂಠಿ ದರ ಪ್ರತೀ ಚೀಲಕ್ಕೆ 60 ಕೆ.ಜಿ., ಹೊಸ ಶುಂಠಿ 1000-1200, ಹಳೆ ಶುಂಠಿ 1800-2000 ಇತ್ತು. ಇದೀಗ ಬೆಲೆ ದಿಢೀರ್ ಏರಿಕೆಯಾಗಿದ್ದು, ಹೊಸ ಶುಂಠಿ ಬೆಲೆ 2,800-3,000 ರು. ಇದ್ದು ಹಳೇ ಶುಂಠಿ 3,500-4,000 ರು.ರಂತೆ ಮಾರಾಟವಾಗುತ್ತಿದೆ. ಒಂದರಡು ತಿಂಗಳಿಗೆ ಹೋಲಿಸಿದರೆ ವಾರದಲ್ಲಿ ಪ್ರತೀ ಚೀಲಕ್ಕೆ ಸರಾಸರಿ ರು. 1,800-2000ರಷ್ಟು ಬೆಲೆ ಹೆಚ್ಚಾಗಿದೆ. ಈ ವರ್ಷ ರೋಗ ಬಾಧೆಯ ಕಾರಣಕ್ಕೆ ಅರ್ಧದಷ್ಟು ಫಸಲು ರೈತರ ಕೈ ಸೇರಿಲ್ಲ. ಬೆಳೆಯನ್ನು ಉಳಿಸಿಕೊಳ್ಳುವುದೋ, ಸಿಕ್ಕಷ್ಟು ದರಕ್ಕೆ ಶುಂಠಿ ಮಾರುವುದೋ ಎನ್ನುವ ಚಿಂತೆಯಲ್ಲಿದ್ದ ರೈತರಿಗೆ ಇದೀಗ ದರ ಏರಿಕೆಯು ಬಹಳ ಸಮಾಧಾನ ತಂದಿದೆ.

ಕೆಲವು ವರ್ಷಗಳ ಹಿಂದಿನ ವರೆಗೂ ಶುಂಠಿಗೆ ಪ್ರತೀ 60 ಕೆ.ಜಿ.ಯ ಚೀಲಕ್ಕೆ 56 ಸಾವಿರದವರೆಗೂ ದಾಖಲೆಯ ಬೆಲೆ ಸಿಕ್ಕಿತ್ತು. ರೈತರು ಇದೇ ಹುರುಪಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಮಾಡಿದ್ದರು, ಆದರೆ ಇದೇ ವರ್ಷ ಜನವರಿ-ಫೆಬ್ರವರಿಯಲ್ಲಿ



1,000-1,200ಕ್ಕೆ ಧಾರಣೆ ಕುಸಿದಿತ್ತು. ಹಸಿ ಶುಂಠಿಗೆ ಉತ್ತಮ ಬೆಲೆ ದೊರೆತ ಹಿನ್ನೆಲೆಯಲ್ಲಿ ಶುಂಠಿ ಬೆಳೆಯುವ ಪ್ರದೇಶ ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದೆ. ಕಳೆದ ಬಾರಿ 60 ಕೆ.ಜಿ ಚೀಲ ವೊಂದಕ್ಕೆ 6000-7000 ರು. ಬೆಲೆ ದೊರೆತ ಹಿನ್ನೆಲೆಯಲ್ಲಿ ಈ ವರ್ಷ ಬೆಳೆಗಾರರು ಮತ್ತಷ್ಟು ಉತ್ತೇಜಿತರಾಗಿದ್ದು, ಕಳೆದ ಬಾರಿಗಿಂತ ಹೆಚ್ಚಿನ ಪ್ರಮಾಣದ ಶುಂಠಿ ಬಿತ್ತನೆಯನ್ನು ಮಾಡಲು ಮುಂದಾಗಿದ್ದರು.

ಬೆಲೆ ಹೆಚ್ಚಳ, ಬೆಳೆಗಾರರಿಗೆ ಸಂತಸ: ಬೆಲೆ ಹೆಚ್ಚಳದ ಹಿನ್ನೆಲೆಯಲ್ಲಿ ಬೆಳೆಗಾರರಲ್ಲಿ ಉತ್ಸಾಹ ಇಮ್ಮಡಿಗೊಂಡಿದೆ. ಶುಂಠಿಯನ್ನು ನಾಟಿ ಮಾಡಲು ಸಕಾಲವಾದ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಅತ್ಯಧಿಕ ನಾಟಿ ಮಾಡಲಾಗಿದೆ. ಆದರೆ ಸ್ಥಳೀಯವಾಗಿ ಕೂಲಿ ಕಾರ್ಮಿಕರ ಕೊರತೆ ಇದ್ದು ಹೊರಗಿನ ಕೂಲಿ ಕಾರ್ಮಿಕರನ್ನು ಕರೆತಂದು ಕೆಲಸ ಮಾಡಿಸ ಬೇಕಾಗಿರುವುದರಿಂದ ನಿರ್ವಹಣಾ ವೆಚ್ಚವೂ ಹೆಚ್ಚಿದೆ.ಹಳೇ ಮೈಸೂರು ಭಾಗದಲ್ಲಿ ಕೂಡಾ ಶುಂಠಿ ಬೆಳೆ ಯಲಾಗುತ್ತಿದೆ. ಜಿಲ್ಲೆಗಳಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ಶುಂಠಿಯನ್ನು ಪ್ರಮುಖ ವಾಣಿಜ್ಯ ಬೆಳೆ ಯನ್ನಾಗಿ ಬೆಳೆಯಲಾಗುತ್ತಿದೆ. ಮೈಸೂರು ಬೆಲ್ಲೆ ಒಂದರಲ್ಲಿಯೇ 8 ಸಾವಿರ ಹೆಕ್ಟೇರ್‌ಗೂ ಅಧಿಕ ಏಮೀನಿನಲ್ಲಿ ಶುಂಠಿ ಬಿತ್ತನೆಯಾಗಿದೆ.

ಹೊಲದಲ್ಲೇ ಬಿಟ್ಟವರಿಗೆ ಬಂಪರ್ ಬೆಲೆ

ಜೂನ್‌ನಲ್ಲಿ ಶುಂಠಿಯನ್ನು ಕೀಳಲು ಪ್ರಾರಂಭಿಸಿದಾಗ ಪ್ರತಿ 60 ಕೆ.ಜಿ ಚೀಲಕ್ಕೆ 700 ರು. ಆರಂಭಿಕ ಬೆಲೆ ಸಿಕ್ಕಿತು. ದಿನ ಕಳೆದಂತೆ ಆಗಸ್ಟ್ ಕೊನೆಯ ವೇಳೆಗೆ ಬೆಲೆ ಏರಿಕೆಯ ಹಾದಿ ಹಿಡಿದು 3200 ರು.ವರೆಗೂ ತಲುಪಿತು. ಕಳೆದ ನಾಲ್ಕೈದು ದಿನಗಳಿಂದ ಹಸಿಶುಂಠಿಯ ಬೆಲೆಯು 60 ಕೆ.ಜಿಯ ಚೀಲಕ್ಕೆ 4,000 ಸಾವಿರ ರು. ತಲುಪಿದ್ದು, ಇಮವರೆಗೂ ಹೆಚ್ಚಿನ ಬೆಲೆಯ ನಿರೀಕ್ಷೆ ಇರಿಸಿ ಹೊಲದಲ್ಲೇ ಬಿಟ್ಟಿದ್ದವರಿಗೆ ಬಂಪರ್ ಬೆಲೆ ದೊರಕುತ್ತಿದೆ.

ಈ ವರ್ಷ ಅತಿವೃಷ್ಟಿಯಿಂದ ಶುಂಠಿ ಬೆಳೆ ಕುಂಠಿತಗೊಂಡಿದೆ. ಫಸಲು ಕೊರತೆಯ ಪರಿಣಾಮವಾಗಿ ಡಿಸೆಂಬರ್ ಅಂತ್ಯದ ವೇಳೆಗೆ ಹಸಿ ಶುಂಠಿ ದರ ಏರಿಕೆಯಾಗಬಹುದು ಎಂಬ ನಿರೀಕ್ಷೆಯಲ್ಲಿದ್ದೇನೆ.
- ಮಂಜೇಗೌಡ ಎಸ್ ಎನ್
ಶುಂಠಿ ವ್ಯಾಪಾರಿ, ಬೆಂಗಳೂರು ಎಪಿಎಂಸಿ

ಈ ವರ್ಷ ಶ್ರಮಪಟ್ಟು ಕೃಷಿ ಮಾಡಿದ ಹಲವು ರೈತರ ಶುಂಠಿ ಫಸಲು ಹಾಳಾಗಿದೆ. ಮಳೆಹಾನಿ, ಸಾಂಕ್ರಾಮಿಕ ರೋಗ ಕಾರಣ ಹಲವು ರೈತರು ದಸರಾ ಸಮಯದಲ್ಲಿಯೇ ಹಸಿ ಶುಂಠಿ ಕಿತ್ತು ಮಾರಾದ ಕಾರಣ ಈಗ ಬೆಲೆ ಏರಿಕೆ ಸಮಗೆ ಲಭ್ಯವಿಲ್ಲದಾಗಿದೆ.
- ಅರುಣ ಗೌಡ ರೈತ, ಹಾಸನ

20.10.2025
Vishwa Vani. Pg.10

ಬೆಂಬಲ ಬೆಲೆ ಕೇಂದ್ರ ತೆರೆಯಲು ರೈತರ ಆಗ್ರಹ | ಪ್ರಸಕ್ತ ಸಾಲಿನಲ್ಲಿ 1,32,203 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ

ಮೆಕ್ಕೆಜೋಳ ಬೆಲೆ ತೀವ್ರ ಕುಸಿತ; ಅನ್ನದಾತರು ಕಂಗಾಲು

ರುದ್ರಗೌಡ ಪಾಟೀಲ

• ಗದಗ: ಜೋಪಿನಜೋಳ ಕಟಾವು ಆಗಿ ಮಾರುಕಟ್ಟೆ ಪ್ರವೇಶಿಸುವ ಹಂತದಲ್ಲಿ ಬೆಲೆ ಕುಸಿತವಾಗಿದೆ. ಉತ್ತಮ ಫಸಲು ಬಂದಿದ್ದರಿಂದ ಜೋಪಿನ ಜೋಳ ಮಾರಾಟ ಮಾಡಿ ದೀಪಾವಳಿ ಹಬ್ಬ ಸಂಭ್ರಮದಿಂದ ಆಚರಿಸುವ ಕನಸು ಕಾಣುತ್ತಿದ್ದ ರೈತರಿಗೆ ಆಘಾತವಾಗಿದೆ.

ಹೆಚ್ಚು ಮೆಕ್ಕೆಜೋಳ ಬೆಳೆಯುವ ಪ್ರದೇಶಗಳಲ್ಲಿ ಈಗ ಗದಗವೂ ಒಂದಾಗಿದ್ದು, ಈ ವರ್ಷ 1,32,203 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದೆ. ಈಗಾಗಲೇ ಬಹುಪಾಲು ರೈತರು ಜೋಳ ಕಟಾವು ಮಾಡುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಕ್ವಿಂಟಾಲ್ ಮೆಕ್ಕೆಜೋಳಕ್ಕೆ ಕೇವಲ 1500 ರೂ.ದರ ಪಿದೆ. ಕಳೆದ ಬಾರಿ ಕ್ವಿಂಟಾಲ್ ಮೆಕ್ಕೆಜೋಳಕ್ಕೆ 1800ರಿಂದ 2200 ರೂ. ದರವಿತ್ತು. ಈ ವರ್ಷ ಮೆಕ್ಕೆಜೋಳ ದರ ಕುಸಿತ ಕಂಡಿದ್ದು, ಜೋಳ ಬೆಳೆದ ರೈತರನ್ನು ತೊಂದರೆಗೆ ಸಿಲುಕಿಸಿದೆ.

ಎಕಾಏಕಿ ದರ ಕುಸಿತ: ಅಲ್ಪಸ್ವಲ್ಪ ಗೋಪಿನ ಜೋಳದ ಫಸಲು ರೈತರ ಕೈ ಸೇರಿದೆ. ರೈತರ ಫಸಲು ಮಾರುಕಟ್ಟೆ ಪ್ರವೇಶಿಸುತ್ತಿದ್ದಂತೆ ಬೆಲೆ ಕುಸಿತ ಕಂಡಿರುವುದು ರೈತರನ್ನು



ಬಿಗಂತ ವಿಶೇಷ

ಸಂಕಷ್ಟಕ್ಕೆ ದೂಡಿದೆ. ಜಿಲ್ಲೆಯಲ್ಲಿ ತೇವಾಂಶಯುಕ್ತ ಗೋಪಿನ ಜೋಳದ ಕಾಳು ಒಣಗಿಸಲು ರೈತರು ಬಯಲು ಜಾಗ, ನೂತನ ಬಡಾವಣೆಗಳ ಸಿಸಿ ರಸ್ತೆಯಲ್ಲಿ ಒಣ ಹಾಕಿರುವುದು ಸಾಮಾನ್ಯವಾಗಿದೆ. ರೈತ ಕುಟುಂಬದ ಕೆಲವರು ರಾಶಿ ಮಾಡಿರುವ ಗೋಪಿನಜೋಳ ಒಣಗಿಸುವ ಕಾಯಕದಲ್ಲಿ, ಇನ್ನು ಕೆಲವರು ಹೊಲ ಹದಗೊಳಿಸುವ ಕಾಯಕದಲ್ಲಿ ನಿರತರಾಗಿದ್ದಾರೆ.

ಕೂಡಲೇ ಖರೀದಿ ಆರಂಭಿಸಿ: ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ 1,400-1,800 ದರದಲ್ಲಿ ಮಾರಾಟವಾಗುತ್ತಿದೆ. ಆದರೆ,

> ಬಿತ್ತನೆ ಬೀಜ, ಗೊಬ್ಬರ, ವಕ್ಕಲಿ, ರೇಬರ್ ಕೂಲಿ ಸೇರಿ ಮೆಕ್ಕೆಜೋಳ ಬೆಳೆಯಲು ಆಗುವ ಖರ್ಚು ಹೆಚ್ಚಾಗುತ್ತದೆ. ಈಗ ಮೆಕ್ಕೆಜೋಳ ದರ ಕಡಿಮೆ ಇರುವುದರಿಂದ ಬೆಳೆದ ಬೆಳೆಯ ಖರ್ಚು ರೈತನ ಮೈಮೇಲೆ ಬರುತ್ತದೆ. ಈ ಬಾರಿ ಮೆಕ್ಕೆಜೋಳ ಬೆಳೆದ ರೈತರ ಬದುಕು ನಿಜಕ್ಕೂ ಸಂಕಷ್ಟಕ್ಕೆ ಸಿಲುಕಿದೆ.
> ■ ಮುತ್ತಪ್ಪ ರೈತ

ಕೇಂದ್ರ ಸರ್ಕಾರ ಪ್ರತಿ ಕ್ವಿಂಟಾಲ್‌ಗೆ 2,400 ಬೆಂಬಲ ಬೆಲೆ ಘೋಷಣೆ ಮಾಡಿದೆ. ರೈತರಿಗೆ ಅನುಕೂಲವಾಗಬೇಕಾದರೆ ಕೂಡಲೇ ಖರೀದಿ ಕೇಂದ್ರ ತೆರೆಯಬೇಕಾದ ಅಗತ್ಯ ಇದೆ. ಇನ್ನು ಖಾಸಗಿ ವ್ಯಾಪಾರಸ್ಥರು ಯಾವುದೇ ಪರವಾನಗಿ ಇಲ್ಲದೆ ನೇರವಾಗಿ ರೈತರ ಮನೆ ಮತ್ತು ಕಣಕ್ಕೆ ತೆರಳಿ ಗೋಪಿನಜೋಳ ಖರೀದಿಸುತ್ತಿದ್ದಾರೆ. ರೈತರ ಪರವಾಗಿ ಕೆಲಸ ಮಾಡಬೇಕಾದ ಸರ್ಕಾರಗಳು ರೈತ ಎಲ್ಲ ಫಸಲು ಮಾರಾಟ ಮಾಡಿದ ಮೇಲೆ ಬೆಂಬಲ ಬೆಲೆ ಘೋಷಿಸಿ ಖರೀದಿ ಕೇಂದ್ರ ಆರಂಭಿಸುತ್ತಾರೆ. ರೈತರ ಹೆಸರಿನಲ್ಲಿ ವರ್ತಕರು ಲಾಭ ಪಡೆಯುತ್ತಾರೆಯೇ ಹೊರತು ರೈತರಿಗೆ ಯಾವುದೇ ಲಾಭ ಸಿಗುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

> ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ರೈತರು ಪುನರಾವರ್ತಿತ ಬೆಳೆಗಳನ್ನು ಬೆಳೆಯುವುದನ್ನು ರೂಢಿಸಿಕೊಂಡಿದ್ದಾರೆ. ವರ್ಷದಿಂದ ವರ್ಷಕ್ಕೆ ಬಿತ್ತನೆಯ ಬೆಳೆಗಳಲ್ಲಿ ಪರಿವರ್ತನೆ ತಂದಾಗ ಮಾತ್ರ ಸಿಡಿ ರೋಗ ಹಾಗೂ ನಂಜಾನು ರೋಗವನ್ನು ನಿಯಂತ್ರಿಸಿ, ಬೆಳೆದ ಬೆಳೆಗಳು ಉತ್ತಮ ಇಳುವರಿ ಪಡೆಯಲು ಸಾಧ್ಯ.
> ■ ತಾರಾಮಣಿ ಜೆ.ಎಚ್., ಜಂಟಿ ಕೃಷಿ ನಿರ್ದೇಶಕರು, ಗದಗ



20.10.2025
Hosa Digantha. Pg.07

ವಿಜಯವಾಣಿ ನಂ 1 ಕನ್ನಡ ದಿನಪತ್ರಿಕೆ



ಸವಣೂರ ತಾಲೂಕಿನ ಕಳಸೂರ ಗ್ರಾಮದ ಭೀಮಣ್ಣ ಚಿಗರಿ

ಕೇಶವಮೂರ್ತಿ ವಿ.ಬಿ. ಹಾವೇರಿ

ಸಾವಯವ ಕೃಷಿಗೆ ಭೀಮಬಲ

ಕೃಷಿಗಾಗಿ ಸಾಲ ಮಾಡಿ, ಬೆಳೆ ಬಾರದೆ ಕೈಸುಟ್ಟುಕೊಂಡು ಆತ್ಮಹತ್ಯೆ ದಾರಿ ತುಳಿಯುವವರು ಹೆಚ್ಚು. ಅಂತಹವರ ನಡುವೆ ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಕಳಸೂರ ಗ್ರಾಮದ ರೈತ ಭೀಮಣ್ಣ ಚಿಗರಿ, ಶೂನ್ಯ ಬಂಡವಾಳದ ಮೂಲಕ ವರ್ಷಕ್ಕೆ ಹತ್ತಾರು ಲಕ್ಷ ರೂ. ಆದಾಯಗಳಿಸುತ್ತ ಇತರರಿಗೂ ಮಾದರಿಯಾಗಿದ್ದಾರೆ.

- ಕಳಸೂರ ರೈತನ ಯಶೋಗಾಥೆ
- 9 ಎಕರೆಯಲ್ಲಿ ಮಿಶ್ರಬೆಳೆ, ಕಳೆಯಿಂದ ಜೀವಕಳೆ

ರಸಗೊಬ್ಬರ, ಕಳೆನಾಶಕ, ರಾಸಾಯನಿಕ ಬಳಕೆಯಿಂದ ಬರಡಾಗಿದ್ದ 9 ಎಕರೆ ಜಮೀನಿನಲ್ಲಿ ಸಾವಯವ ಕೃಷಿ ಮಾಡಿಕೊಂಡು ಬಗೆ ಬಗೆಯ ಹಣ್ಣಿನ ತೋಟ ಸೃಷ್ಟಿಸಿದ್ದಾರೆ. 2010ರಲ್ಲಿ ಸಾವಯವ ಕೃಷಿ ಆಳವಡಿಸಿಕೊಂಡ ಭೀಮಣ್ಣ, ರಾಜ್ಯದ ವಿವಿಧೆಡೆಯ ಯಶಸ್ವಿ ರೈತರ ತೋಟಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಿದ್ದಾರೆ. ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೂ ಭೇಟಿ ನೀಡಿ, ಅಲ್ಲಿನ ಸಂಶೋಧಕರ ಸಲಹೆಯಂತೆ ಕಳಸೂರ ಗ್ರಾಮದ 9 ಎಕರೆ ಪೈಕಿ ನಾಲ್ಕೂವರೆ ಎಕರೆ ಹೊಲದಲ್ಲಿ ಚಿಕ್ಕು, ಪೇರಲ ಸಸಿ ಹಾಕಿದ್ದಾರೆ. ನೈಸರ್ಗಿಕ ಕೃಷಿ ಸಾಧಕ ಸುಭಾಷ ಪಾಳೇಕರ ಅವರ ತರಬೇತಿ ಶಿಬಿರದಿಂದ ಮತ್ತಷ್ಟು ಮಾಹಿತಿ ಪಡೆದು ಶೂನ್ಯ ಬಂಡವಾಳದಿಂದ ಹೇಗೆ ಕೃಷಿ ಮಾಡಬಹುದು ಎಂಬುದನ್ನು ಕಲಿತು, 9 ಎಕರೆ ತೋಟದಲ್ಲಿ ತೆಂಗು, ಪೇರಲ, ಚಿಕ್ಕು, ನೇರಳೆ, ಮಾವು, ಬೆಟ್ಟದ ನೆಲ್ಲಿಕಾಯಿ, ನಿಂಬೆ, ಕಿತ್ತಳೆ, ಮೋಸಂಬಿ ಸೇರಿ ಹತ್ತಾರು ಮಿಶ್ರ ಬೆಳೆಗಳನ್ನು ಬೆಳೆದಿದ್ದಾರೆ. ವರ್ಷಕ್ಕೆ ಪೇರಲದಿಂದ ಅಂದಾಜು 3 ಲಕ್ಷ ರೂ., ತೆಂಗಿನಿಂದ 4 ಲಕ್ಷ ರೂ., ಚಿಕ್ಕು ಹಾಗೂ ನೇರಳೆಯಿಂದ ತಲಾ 1 ಲಕ್ಷ ರೂ. ಆದಾಯ ಪಡೆಯುತ್ತಿದ್ದಾರೆ. ತೋಟದ ತುಂಬಾ ಒಂದೆಲಗ ಹಬ್ಬಿಕೊಂಡಿದ್ದು, ಹಸಿರು ಗೊಬ್ಬರವಾಗಿ ಕೆಲಸ ಮಾಡುತ್ತಿದೆ. ತೆಂಗಿನ ಗರಿ, ಚಿಪ್ಪು, ಇತರ ಕಳೆಯನ್ನು ಗಿಡದ ಬುಡಕ್ಕೆ ಹಾಕುತ್ತಾರೆ. ತೋಟದಲ್ಲಿ ಕೃಷಿ ಹೊಂಡ, ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ನೂರಕ್ಕೂ ಅಧಿಕ ನಾಟಿ ಕೋಳಿಗಳನ್ನು ಸಾಕಿದ್ದಾರೆ.



ತೋಟದಲ್ಲಿ ದೇಸಿ ಆಕಳುಗಳು

ಸಗಣಿ, ಗಂಜಲಕ್ಕಾಗಿ ದೇಸಿ ಆಕಳು

ಆರಂಭದಲ್ಲಿ ಒಂದು ದೇಸಿ ಆಕಳು ಸಾಕಿದ್ದ ಭೀಮಣ್ಣ, ನಂತರ 20ಕ್ಕೂ ಅಧಿಕ ಆಕಳನ್ನು ಸಾಕಲು ಆರಂಭಿಸಿದರು. ಸಗಣಿ, ಗಂಜಲ, ಗೊಬ್ಬರಕ್ಕಾಗಿ ಸಾಕುತ್ತಿದ್ದೇನೆ. ಇದರಿಂದ ತೋಟದಲ್ಲಿ ಬಂಗಾರದಂಥ ಬೆಳೆ ಬರುತ್ತಿದೆ. ಗೊಬ್ಬರದಿಂದ ಜೀವಾಣುಗಳ ವೃದ್ಧಿ ಆಗುತ್ತವೆ. ವರ್ಷಕ್ಕೆ ನಾಲ್ಕೈದು ಬಾರಿ ಜೀವಾಮೃತ ಬಳಸುತ್ತೇನೆ. ಆಕಳ ಗಂಜಲ, ಗೊಬ್ಬರ ಬಳಸಿದರೆ ಹೊಲ ಸಂಪದ್ಭರಿತ ವಾಗುತ್ತದೆ ಎಂಬುದು ಭೀಮಣ್ಣನವರ ಅನುಭವದ ನುಡಿ.

ಕೆಮಿಕಲ್ ಹಾಕಲ್ಲ ಎಂದು ಪ್ರತಿಜ್ಞೆ

2004-05ರಲ್ಲಿ ಕಳಸೂರ ಭಾಗದಲ್ಲಿ ಸೂರ್ಯಕಾಂತಿ, ಮೆಕ್ಕೆಜೋಳ ಬೀಜೋತ್ಪಾದನೆ ಹೆಚ್ಚಾಗಿತ್ತು. ಭೀಮಣ್ಣ ಸೂರ್ಯಕಾಂತಿ, ಮೆಕ್ಕೆಜೋಳ ಬೀಜೋತ್ಪಾದನೆಯಲ್ಲಿ ತೊಡಗಿದ್ದರು. ಅತಿಯಾಗಿ ರಾಸಾಯನಿಕ ಬಳಸಿದ ಕಾರಣ ಕ್ರಮೇಣ ಇಳುವರಿ ಕಡಿಮೆಯಾಗಿ ನಷ್ಟವಾಗತೊಡಗಿತು. ಭೂಮಿಯ ಫಲವತ್ತತೆಯೂ ಹೋಯಿತು. ಇದರಿಂದ ಬೇಸತ್ತ ಭೀಮಣ್ಣ ಕೃಷಿಯಲ್ಲಿ ಹೊಸತನ್ನು ಮಾಡಬೇಕು ಎಂದು ಸಾವಯವ ಕೃಷಿಯತ್ತ ವಾಲಿದರು. ನನ್ನ ಹೊಲಕ್ಕೆ ಇನ್ನು ಮುಂದೆ ರಾಸಾಯನಿಕ ಹಾಕುವುದಿಲ್ಲ ಎಂದು 2010ರಲ್ಲಿ ಪ್ರತಿಜ್ಞೆ ಮಾಡಿದರು. ಅದಕ್ಕೆ ಬದ್ಧರಾಗಿ ಸಾವಯವ ಕೃಷಿ ಆಳವಡಿಸಿಕೊಂಡಿದ್ದಾರೆ.



ಭವಿಷ್ಯದಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಎಂದೋ ಮಾಡುವುದಕ್ಕಿಂತ ಈಗಲೇ ಸಾವಯವ ಆಳವಡಿಸಿಕೊಳ್ಳಬೇಕು. ದೇಸಿ ಜಾನುವಾರು ಸಾಕಬೇಕು. ದೇಸಿತನ ಬಿಟ್ಟರೆ ಭೂಮಿಯ ಮತ್ತು ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಿಲ್ಲ.

| ಭೀಮಣ್ಣ ಚಿಗರಿ ಸಾವಯವ ಕೃಷಿಕ, ಕಳಸೂರ

ಜ್ಯೂಸ್, ಪೌಡರ್ ಮೂಲಕ ಮೌಲ್ಯವರ್ಧನೆ

ಬೆಳೆಗಳನ್ನು ನೇರವಾಗಿ ಮಾರಾಟ ಮಾಡದೆ ಜ್ಯೂಸ್, ಪೌಡರ್, ಇತರ ಉತ್ಪನ್ನ ತಯಾರಿಸಿ ಮೌಲ್ಯವರ್ಧನೆ ಮಾಡು ತ್ತಿರುವ ಭೀಮಣ್ಣ, ನೇರಳೆ ಜ್ಯೂಸ್, ನೇರಳೆ ಬೀಜದ ಪೌಡರ್, ಬೆಟ್ಟದ ನೆಲ್ಲಿಕಾಯಿ ಉಪ್ಪಿನಕಾಯಿ, ಚಿಕ್ಕು, ಪೇರಲೆ ಹಲ್ವಾ, ಜ್ಯೂಸ್ ಮಾಡುವ ಕುರಿತು ಕಾರ್ಯಪ್ರವೃತ್ತರಾಗಿದ್ದಾರೆ.

Bengaluru Edition
Oct 20, 2025 Page No. 10
Powered by: erelego.com



ಫಿಲಿಪೈನ್ಸ್‌ನ ಇಂಟರ್‌ನ್ಯಾಷನಲ್ ರೈಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನೊಂದಿಗೆ ಭತ್ತದ ತಳಿ ಸಂಶೋಧನೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಯಿತು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಜುನೆಲ್ ನಯಾನೋ, ಡಾ.ಸಂಕಲ್ಪ್ ಭೋಜ್ಞೆ, ಡಾ.ಕೆ.ಎಂ. ಹರಿಣಿಕುಮಾರ್ ಇತರರಿದ್ದರು.

ಐಆರ್‌ಆರ್‌ಐ ಜತೆಗೆ ಒಪ್ಪಂದ

ಮಂಡ್ಯದ ಭತ್ತಕ್ಕೆ ಫಿಲಿಪೈನ್ಸ್ ಸ್ಪರ್ಶ!

ಕೆ.ಎನ್.ರಾಘವೇಂದ್ರ ಮಂಡ್ಯ

ಭತ್ತ ಉತ್ಪಾದನೆಯಲ್ಲಿ ವಿಶ್ವದ ಎಂಟನೇ ಅತಿ ದೊಡ್ಡ ರಾಷ್ಟ್ರವೆನ್ನುವ ಹೆಗ್ಗಳಿಕೆಯ ಫಿಲಿಪೈನ್ಸ್‌ನೊಂದಿಗೆ ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ತಳಿ ಸಂಶೋಧನೆಗೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಸಹಿ ಹಾಕಿದೆ. ಇದರೊಂದಿಗೆ ಕೃಷಿ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಹತ್ವದ ಹೆಜ್ಜೆಯನ್ನಿಟ್ಟಿದ್ದಾರೆ.

ರಾಜ್ಯದ ಭತ್ತ ಉತ್ಪಾದನಾ ಕ್ಷೇತ್ರದಲ್ಲಿ ಮಂಡ್ಯ ಜಿಲ್ಲೆಯೂ ಪ್ರಮುಖ ಸ್ಥಾನ ಹೊಂದಿದೆ. ಈ ನಡುವೆ ಭತ್ತಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆ ಜತೆಗೆ ಇಳುವರಿ ಕುಂಠಿತವಾಗುತ್ತಿರುವುದು ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದೆ. ಅದಾಗ್ಯೂ ಭತ್ತದ ಉತ್ಪಾದನೆಗೆ ಹೆಚ್ಚಿನ ರೈತರು ಒಲವು ತೋರುತ್ತಾರೆ. ಈ ಹಿನ್ನೆಲೆಯಲ್ಲಿ ಭತ್ತದಲ್ಲಿ ಹೊಸ ತಳಿ ಸಂಶೋಧನೆಗೆ ಮಂಡ್ಯ ಕೃಷಿ ವಿವಿ ಫಿಲಿಪೈನ್ಸ್‌ನ ಇಂಟರ್‌ನ್ಯಾಷನಲ್ ರೈಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಐಆರ್‌ಆರ್‌ಐ)ನೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಪ್ರಸ್ತಾವನೆಯಲ್ಲಿ ಏನಿದೆ?: ಸಚಿವ ಎನ್. ಚಲುವರಾಯಸ್ವಾಮಿ ಸೂಚನೆ ಮೇರೆಗೆ ಮಂಡ್ಯ ಕೃಷಿ ವಿವಿ ವಿಶೇಷಾಧಿಕಾರಿ ಡಾ.ಕೆ. ಎಂ.ಹರಿಣಿಕುಮಾರ್ ಐಆರ್‌ಆರ್‌ಐಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಅದರಂತೆ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಕೊಡಗು ಜಿಲ್ಲೆಗಳಲ್ಲಿ ಕೃಷಿ ಅಭಿವೃದ್ಧಿ ಮತ್ತು ರೈತರನ್ನು ಉನ್ನತೀಕರಿಸಲು ವಿ.ಸಿ.ಫಾರ್ಮ್‌ನಲ್ಲಿ ಕೃಷಿ ವಿವಿ ಸ್ಥಾಪಿಸಲಾಗಿದೆ. ಭಾರತ ಮತ್ತು ಕರ್ನಾಟಕದಲ್ಲಿ ಹೆಚ್ಚಿನ ಜನರಿಗೆ ಅಕ್ಕಿ ಪ್ರಧಾನ ಆಹಾರವಾಗಿದೆ. ಆದಾಯ ಮತ್ತು ಉದ್ಯೋಗದ ಪ್ರಮುಖ ಮೂಲದ ಜತೆಗೆ ರಾಜ್ಯದ ಆರ್ಥಿಕತೆಯ ಬೆನ್ನೆಲುಬಾಗಿದೆ. ಕರ್ನಾಟಕದಲ್ಲಿ ಸುಮಾರು 1.2 ಮಿಲಿಯನ್ ಹೆಕ್ಟೇರ್‌ನಲ್ಲಿ ಭತ್ತ ಬೆಳೆಯುತ್ತಿದ್ದು, ಪ್ರತಿ ಹೆಕ್ಟೇರ್‌ಗೆ ಸರಾಸರಿ 3 ಟನ್ ಇಳುವರಿ ನೀಡುತ್ತದೆ. ಇದರಲ್ಲಿ ಕೇ.44 ನೀರಾವರಿ ಮತ್ತು ಕೇ.56 ಮಳೆಯಾಶ್ರಿತವಾಗಿದೆ.

ಪ್ರಸ್ತುತ ಕರ್ನಾಟಕದಲ್ಲಿ ಭತ್ತದ ಸಂಶೋಧನೆಯು ವಿ.ಸಿ. ಫಾರ್ಮ್ ಹಾಗೂ ಗಂಗಾವತಿ ಕೇಂದ್ರದಲ್ಲಿ ನಡೆಯುತ್ತಿದೆ. 1969ರಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ವಿ.ಸಿ. ಫಾರ್ಮ್‌ನಲ್ಲಿ ಅಖಿಲ ಭಾರತ ಸಂಯೋಜಿತ ಭತ್ತದ ಸುಧಾರಣಾ ಯೋಜನೆ ಪ್ರಾರಂಭಿಸಿತು. ಇದು ಅಂತಾರಾಷ್ಟ್ರೀಯ ಮನ್ನಣೆ ಗಳಿಸಿದೆ. ಗಮನಾರ್ಹ ವಿಷಯವೆಂದರೆ ಭಾರತದ ಮೊದಲ ಹೈಬ್ರಿಡ್ ಭತ್ತದ ವಿಧವಾದ ಕೆಆರ್ ಎಚ್-2 ಅನ್ನು ಫಿಲಿಪೈನ್ಸ್‌ನ ಐಆರ್‌ಆರ್ ಐನಿಂದ ಜರ್ಮಪ್ಲಾಸಂ ಬಳಸಿ ವಿ.ಸಿ. ಫಾರ್ಮ್‌ನಲ್ಲಿ ಅಭಿವೃದ್ಧಿಪಡಿಸಲಾಗಿತ್ತು.

ಗುಣಮಟ್ಟದ ಅಕ್ಕಿ ಪೂರೈಕೆ ಗುರಿ

ಹವಾಮಾನ ಬದಲಾವಣೆ, ನೀರಿನ ಕೊರತೆ, ಹೆಚ್ಚುತ್ತಿರುವ ಕೃಷಿ ವೆಚ್ಚ, ಕೀಟ ಮತ್ತು ರೋಗಗಳ ಒತ್ತಡ ಮತ್ತು ಕುಗ್ಗುತ್ತಿರುವ ಭತ್ತದ ವಿಸ್ತೀರ್ಣದಂತಹ ಸವಾಲು ಎದುರಿಸಲು ಹಾಗೂ ಉತ್ಪಾದಕತೆ ಹೆಚ್ಚಿಸಲು ವಿ.ಸಿ. ಫಾರ್ಮ್ ವಿಜ್ಞಾನಿಗಳು 45 ಭತ್ತದ ಪ್ರಭೇದ, 2 ಮಿಶ್ರತಳಿ ಮತ್ತು 47 ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದಾರೆ. ಆದರೆ ಈ ಪ್ರಯತ್ನಗಳ ಹೊರತಾಗಿಯೂ ಕರ್ನಾಟಕದಲ್ಲಿ ಭತ್ತದ ಕೃಷಿ ನೀರಿನ ಕೊರತೆ, ಕೀಟ ಮತ್ತು ರೋಗಗಳ ಹರಡುವಿಕೆ, ಆಜ್ಞಿವಿಕ ಒತ್ತಡ, ಕಾರ್ಮಿಕರ ಕೊರತೆಯಿಂದ ಕುಸಿಯುತ್ತಿದೆ. ಈ ನಿಟ್ಟಿನಲ್ಲಿ ಹೊಸ ತಳಿ ಸಂಶೋಧನೆಗೆ ಐಆರ್‌ಆರ್‌ಐ ನೆರವಿನ ಅವಶ್ಯಕತೆ ಇದೆ ಎಂದಿದ್ದಾರೆ.

**ಕುಗ್ಗುತ್ತಿರುವ ಕೃಷಿ ಪದೇಶಗಳ ನಡುವೆಯೂ ಭತ್ತಕ್ಕೆ ಹೆಚ್ಚುತ್ತಿರುವ ವೇದಿಕೆ ಪೂರೈಸಲು ಹವಾಮಾನ, ಸ್ಮಾರ್ಟ್, ಹೆಚ್ಚಿನ ಇಳುವರಿ ನೀಡುವ, ಕೀಟ-ನಿರೋಧಕ ಮತ್ತು ಪೋಷಕಾಂಶ-ದಟ್ಟವಾದ ಭತ್ತದ ಪ್ರಭೇದಗಳು ಬೇಕಾಗುತ್ತವೆ. ಈ ನಿಟ್ಟಿನಲ್ಲಿ ಫಿಲಿಪೈನ್ಸ್‌ನ ಐಆರ್‌ಆರ್‌ಐ ಜತೆ ಹೊಸ ಸಹಯೋಗದ ಸಂಶೋಧನಾ ಉಪಕ್ರಮದ ಅವಶ್ಯಕತೆ ಇದೆ. ಇದರಿಂದ ಉತ್ತಮಮಟ್ಟದ ಸಂಶೋಧನೆಗೆ ಅನುವು ಮಾಡಿಕೊಡುವುದರ ಜತೆಗೆ ಭಾರತದ ಕೃಷಿ ವಲಯಕ್ಕೆ ವಿಶಾಲ ಅವಕಾಶ ತೆರೆಯುತ್ತದೆ. ಒಪ್ಪಂದದ ಮೂಲಕ ಸಾಂಪ್ರದಾಯಿಕ ಭತ್ತದ ತಳಿಗಳನ್ನು ಅಧ್ಯಯನ ಮಾಡುವುದು ಮತ್ತು ಹೆಚ್ಚಿಸುವುದು, ಹವಾಮಾನ-ನಿರೋಧಕ ಮತ್ತು ಪೋಷಕಾಂಶ-ಭರಿತ ಮಿಶ್ರತಳಿ ಅಭಿವೃದ್ಧಿ, ಉತ್ತಮ ಬೆಳೆ ನಿರ್ವಹಣೆ ಪದ್ಧತಿಗಳನ್ನು ಉತ್ತೇಜಿಸುವುದು. ಭತ್ತದ ಸಂಶೋಧನೆ ಮತ್ತು ಕೃಷಿಯಲ್ಲಿ ವಿಜ್ಞಾನಿಗಳು ಮತ್ತು ರೈತರನ್ನು ಸಬಲೀಕರಣಗೊಳಿಸಬಹುದು. ಪರಿಣಾಮ ಫಿಲಿಪೈನ್ಸ್‌ಗೆ ಉತ್ತಮಮಟ್ಟದ ಅಕ್ಕಿಯನ್ನು ರಫ್ತು ಮಾಡುವ ಗುರಿ ಹೊಂದಲಾಗಿದೆ. ರಾಜ್ಯದ ರೈತ ಸಮುದಾಯಗಳಲ್ಲಿ ಸುಧಾರಿತ ಜೀವನೋಪಾಯಕ್ಕೆ ದಾರಿ ಮಾಡಿಕೊಡುತ್ತವೆ ಎಂದು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ.

ಒಡಂಬಡಿಕೆಗೆ ಸಹಿ

**ಜಿಲ್ಲೆಯ ಜನರ ಹಲವು ದಶಕದ ಬೇಡಿಕೆಯಂತೆ ವಿ.ಸಿ. ಫಾರ್ಮ್‌ನಲ್ಲಿ ಕೃಷಿ ವಿಶ್ವವಿದ್ಯಾಲಯ ಪ್ರಾರಂಭಿಸುವಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಮಹತ್ವದ ಪಾತ್ರ ವಹಿಸಿದ್ದರು. ಇದರ ಮುಂದುವರಿದ ಭಾಗವಾಗಿ ಭತ್ತದ ತಳಿ ಉತ್ಪಾದನೆಯಲ್ಲಿ ಮಹತ್ವದ ಬದಲಾವಣೆ ತರುವ ನಿಟ್ಟಿನಲ್ಲಿ ಫಿಲಿಪೈನ್ಸ್‌ನ ಐಆರ್‌ಆರ್‌ಐ ಜತೆ ಮಹತ್ವದ ಒಡಂಬಡಿಕೆಗೆ ಸಹಿ ಹಾಕಿದ್ದಾರೆ. ಫಿಲಿಪೈನ್ಸ್‌ನ ಮನಿಲಾದಲ್ಲಿರುವ ಅಂತಾರಾಷ್ಟ್ರೀಯ ಭತ್ತ ಸಂಶೋಧನಾ ಕೇಂದ್ರಕ್ಕೆ ಉನ್ನತ ಮಟ್ಟದ ನಿಯೋಗದೊಂದಿಗೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತೆರಳಿದ್ದಾರೆ. ರಾಜ್ಯದಲ್ಲಿ ನೆರೆ ಹಾವಳಿ, ಬರ ಪರಿಸ್ಥಿತಿ, ಕರಾವಳಿ, ಮಲೆನಾಡು, ಬಯಲುಸೀಮೆ ಹೀಗೆ ವಿಭಿನ್ನ ಭೌಗೋಳಿಕ ಪರಿಸರಕ್ಕೆ ಹೊಂದಾಣಿಕೆಯಾಗುವ ವಿವಿಧ ಜೈವಿಕ, ಅಜೈವಿಕ ಒತ್ತಡಗಳಿಗೆ ನಿರೋಧಕತೆ ಜತೆಗೆ ಪೌಷ್ಟಿಕಾಂಶವುಳ್

ಕೃಷಿ ವಿವಿ ಪ್ರೊಫೆಸರ್ ವರ್ಗ ಎತ್ತಿಹಿಡಿದ ಕೋರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಅಸೋಸಿಯೇಟ್ ಪ್ರೊಫೆಸರ್ ಜಗನ್ನಾಥ ಓಲೇಕಾರ್ ಅವರನ್ನು ಮಂಡ್ಯದ ವಿಸಿ ಫಾರಂಗೆ ವರ್ಗಾವಣೆ ಮಾಡಿದ ಕ್ರಮವನ್ನು ಹೈಕೋರ್ಟ್ ವಿಭಾಗೀಯ ಪೀಠ ಎತ್ತಿಹಿಡಿದಿದೆ.

ಅಲ್ಲದೆ, ''ಸರಕಾರ ಅರ್ಜಿದಾರರ ಶ್ರೇಣಿಯನ್ನು ಕೆಳಗಿಳಿಸಿಲ್ಲ, ಬದಲಿಗೆ ಹಾಲಿ ಇದ್ದ ಸ್ಥಾನಕ್ಕಿಂತ ಉನ್ನತ ಶ್ರೇಣಿಯನ್ನು ನೀಡಿದೆ ಮತ್ತು ಅವರ ವರ್ಗಾವಣೆ 2005ರ ನಿಯಮಗಳಿಗೆ ಅನುಗುಣವಾಗಿವೆಯೇ ಇದೆ,'' ಎಂದು ನ್ಯಾಯಾಲಯ ಹೇಳಿದೆ.

ತಮ್ಮ ವರ್ಗಾವಣೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ಏಕಸದಸ್ಯ ಪೀಠದ ತೀರ್ಪು ಪ್ರಶ್ನಿಸಿ ಜಗನ್ನಾಥ್ ಓಲೇಕಾರ್ ಸಲ್ಲಿಸಿದ್ದ ಮೇಲ್ಮನವಿ ಪರಿಶೀಲಿಸಿದ ನ್ಯಾ| ವಿಭು ಬಖ್ರು ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, ''2005ರ ವಿಶ್ವವಿದ್ಯಾಲಯ ವರ್ಗಾವಣೆ ನಿಯಮಗಳ ಪ್ರಕಾರ ಪ್ರತಿಯೊಬ್ಬ ಶಿಕ್ಷಕರು, ಸೇವಾ ಸಿಬ್ಬಂದಿ ಅಥವಾ ಸಿಬ್ಬಂದಿ ಬೆಂಗಳೂರು ಕ್ಯಾಂಪಸ್ ಹೊರತುಪಡಿಸಿ ಹೊರಗೆ ಐದು ವರ್ಷಗಳ

ಮಂಡ್ಯದ ವಿಸಿ ಫಾರಂಗೆ ವರ್ಗಾವಣೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾ



ಕಾಲ ಸೇವೆ ಸಲ್ಲಿಸಬೇಕು. ಅದರಂತೆ ವರ್ಗಾವಣೆ ಮಾಡಲಾಗಿದೆ. ಹಾಗಾಗಿ, ವರ್ಗಾವಣೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ'' ಎಂದು ಹೇಳಿದೆ.

ಅಲ್ಲದೆ, ತಮ್ಮ ವರ್ಗಾವಣೆಗೂ ಮುನ್ನ ಕೇಂದ್ರ ಸರಕಾರದ ಅನುಮತಿ ಪಡೆಯಬೇಕಿತ್ತು ಎಂಬ ಅರ್ಜಿದಾರರ ವಾದ ತಳ್ಳಹಾಕಿರುವ ನ್ಯಾಯಾಲಯ, ''ನಿಯಮಗಳ ಪ್ರಕಾರ ವರ್ಗಾವಣೆಗೆ ಕೇಂದ್ರ ಸರಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಇಲಾಖೆಗಳ ಜತೆ ಸಮಾಲೋಚನೆ ನಡೆಸಬೇಕಾದ ಅಗತ್ಯತೆ ಇಲ್ಲ,'' ಎಂದು ಆದೇಶಿಸಿದೆ.

ವರ್ಗಾವಣೆ ಆದೇಶವನ್ನು ಎತ್ತಿಹಿಡಿದಿರುವ ವಿಭಾಗೀಯ ಪೀಠ, ''ಮಂಡ್ಯದ ವಿಸಿ ಫಾರಂ ಕೂಡ ಕೃಷಿ ವಿಜ್ಞಾನ ವಿವಿಯ ಒಂದು ಭಾಗವೇ ಆಗಿದೆ. ಅವರನ್ನು ಬೇರೆ ಹೊಸ ವಿವಿಗೆ ವರ್ಗಾವಣೆ ಮಾಡಿದ್ದರೆ ಆಗ ಬೇರೆ ಸಂದರ್ಭ ಎದುರಾಗುತ್ತಿತ್ತು. ಸದ್ಯ ಈ ಮೇಲ್ಮನವಿಯಲ್ಲಿ ಯಾವುದೇ ಮೆರಿಟ್ ಇಲ್ಲ ಹಾಗಾಗಿ, ವರ್ಗಾವಣೆ ಆದೇಶದಂತೆ ಅರ್ಜಿದಾರರು ವಿಸಿ ಫಾರಂನಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕು,'' ಎಂದು ನಿರ್ದೇಶನ ನೀಡಿದೆ.

ಜಗನ್ನಾಥ್ ಓಲೇಕಾರ್ ಬೆಂಗಳೂರಿನ ಕೃಷಿ ವಿವಿಯಲ್ಲಿ ಸಹಾಯಕ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರನ್ನು 2024ರ ಜು.8ರಂದು ಮಂಡ್ಯದ ವಿಸಿ ಫಾರಂಗೆ ವರ್ಗಾವಣೆ ಮಾಡಲಾಗಿತ್ತು. ಓಲೇಕಾರ್ ಆ ಆದೇಶವನ್ನು ಪ್ರಶ್ನಿಸಿದ್ದರು. ಏಕಸದಸ್ಯ ಪೀಠ 2024ರ ಸೆ.27ರಂದು ಅವರ ಅರ್ಜಿ ವಜಾಗೊಳಿಸಿತ್ತು. ಅದನ್ನು ಪ್ರಶ್ನಿಸಿ ಓಲೇಕಾರ್ ಮೇಲ್ಮನವಿ ಸಲ್ಲಿಸಿದ್ದರು, ವಿಭಾಗೀಯ ಪೀಠ 2024ರ ನ.11ರಂದು ಓಲೇಕಾರ್‌ಗೆ ರಜೆ ಮೇಲೆ ತೆರಳಲು ಅನುಮತಿ ನೀಡಿ, ವರ್ಗಾವಣೆ ಸಂಬಂಧ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಮಧ್ಯಂತರ ಆದೇಶ ನೀಡಿತ್ತು. ಇದೀಗ ಮೇಲ್ಮನವಿ ವಜಾಗೊಳಿಸಿ ಅಂತಿಮ ಆದೇಶ ನೀಡಿದೆ.

Vijaya Kar. Pg.10